# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಎಸ್ ಸಿ ಕೇಸ್ ನಂ. 121/2021

ಚಾ.ಸಾ. 54

ಪ್ರಾ.ಸಾ. 32

## ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 15.07.2026

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ.ಆರ್.ಗೌಡ |
| ತಂದೆಯ ಹೆಸರು | : | ನರಸಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪಿ.ಐ. ನೆಲಮಂಗಲ ಟೌನ್ ಪೊಲೀಸ್ ಠಾಣೆ |
| ವಾಸ | : | ನೆಲಮಂಗಲ |

## ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ

1. ನಾನು ಮಾರ್ಚ್ 30.03.2021 ರಿಂದ 30.04.2022 ರವರೆಗೆ ಮದ್ದೂರು ಟೌನ್ ಸಿ.ಪಿ.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 10.05.2021 ರಂದು ನಾನು ವೃತ್ತ ಕಚೇರಿಯಲ್ಲಿ ಇದ್ದಾಗ ಮದ್ದೂರು ಪೊಲೀಸ್ ಠಾಣೆಯ ಪಿ.ಎಸ್.ಐ ರವರು ಹಾಜರಾಗಿ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಕೊಟ್ಟಿರುತ್ತಾರೆ. ಸದರಿ ಪ್ರಕರಣವು ಘೋರ ಪ್ರಕರಣವಾಗಿರುತ್ತದೆ. ನಾನು ಸದರಿ ಪ್ರಕರಣದ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ತಿಳಿಸಿ ತನಿಖೆ ಕೈಗೊಂಡಿದ್ದು ಕೃತ್ಯ ನಡೆದ ಸ್ಥಳವಾದ ಗೆಜ್ಜಲಗೆರೆ ಗ್ರಾಮದ ಕೆ.ಎಂ.ಎಫ್ ಡೈರಿಯ ಹಿಂಭಾಗ ನೀರು ಹರಿಯುವ ಹಳ್ಳದ ಸಮೀಪ ಮೈಸೂರು – ಬೆಂಗಳೂರು ಹೆದ್ದಾರಿ ರಸ್ತೆ ಪಕ್ಕದಲ್ಲಿ ಮಂಡಯ್ಯ ಶಿವಣ್ಣರವರ ಜಮೀನಿನ ನೇರದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಪಂಚರಾದ ಅಭಿನಯ ಮತ್ತು ಪವನಕುಮಾರ್ ರವರನ್ನು

ಹಾಜರುಪಡಿಸಿಕೊಂಡು ಅವರಿಗೆ ನೋಟೀಸ್ ಜಾರಿ ಮಾಡಿ ಕೇಸಿನ ವಿಚಾರವನ್ನು ತಿಳಿಸಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.40 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.40(ಸಿ) ಎಂದು ಗುರುತಿಸಲಾಯಿತು.

3. ಆ ಸಮಯದಲ್ಲಿ ಮೃತನ ತಂದೆ ಶ್ರೀಕಂಠರವರು ಸ್ಥಳದಲ್ಲಿ ಹಾಜರಿದ್ದರು. ನಾನು ಘಟನಾ ಸ್ಥಳದಲ್ಲಿ ಒಂದು ಮೃತದೇಹವನ್ನು ನೋಡಿರುತ್ತೇನೆ. ಪಂಚನಾಮೆ ಕಾಲದಲ್ಲಿ ಒಂದು ಮೋಟಾರ್ ಸೈಕಲ್, ಮೃತನ ಬಲಭಾಗ ಮತ್ತು ಎಡಭಾಗದಲ್ಲಿ ರಕ್ತದ ಕಲೆಯಾಗಿರುವ ಸಿಮೆಂಟ್ ನ ಇಟ್ಟಿಗೆಗಳು, ಮೃತನ ಬಲಭಾಗದಲ್ಲಿ ಒಂದು ಲಾಂಗು ಬಿದ್ದಿತ್ತು. ಸ್ಥಳದಲ್ಲಿ ರಕ್ತ ಚೆಲ್ಲಾಡಿತ್ತು. ಮೃತನ ಮೈ ಮೇಲೆ ಮಚ್ಚಿನಿಂದ ಕೊಚ್ಚಿದ ಹಲವು ಗಾಯಗಳಾಗಿದ್ದವು. ಎಡಕಿವಿ ಮಧ್ಯದಲ್ಲಿ ಕತ್ತರಿಸಿದ ಗಾಯವಾಗಿತ್ತು ಮತ್ತು ದೇಹದ ಮೇಲೆ ಸಾಕಷ್ಟು ಗಾಯಗಳಾಗಿದ್ದವು.

4. ಈ ಮೇಲೆ ಹೇಳಿದ ವಸ್ತುಗಳನ್ನು ಮತ್ತು ರಕ್ತಸಿಕ್ತ ಮಣ್ಣನ್ನು ಮತ್ತು ಸಾದಾ ಮಣ್ಣನ್ನು ಪಂಚರ ಸಮಕ್ಷಮದಲ್ಲಿ ಪ್ರತ್ಯೇಕವಾಗಿ ಪ್ಲಾಸ್ಟಿಕ್ ಚೀಲದಲ್ಲಿ ಸಂಗ್ರಹಿಸಿ ಬಿಳಿ ಬಟ್ಟೆಯಲ್ಲಿ ಹೊಲೆದು ಎಂ.ಎಂ. ಅಕ್ಷರದಿಂದ ಸೀಲ್ ಮಾಡಿ ಅದರ ಮೇಲೆ ಪಂಚರ ಹಾಗೂ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಆ ಬಗ್ಗೆ ನಿಪಿ.2 ರಂತೆ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ರಾತ್ರಿ 10.10 ರಿಂದ 11.10 ರವರೆಗೆ ಟಾರ್ಚ್ ಬೆಳಕಿನಲ್ಲಿ ಮಾಡಿರುತ್ತೇನೆ. ನಾನು ಈಗ ನಿಪಿ.2 ನೋಡುತ್ತಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಇ) ಎಂದು ಗುರುತಿಸಲಾಯಿತು.

5. ನಾನು ಈಗ ಜಪ್ತು ಪಡಿಸಿಕೊಂಡಿರುವ ವಸ್ತುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ರಿಂದ 3, 9 ಮತ್ತು 10 ಎಂದು ಗುರುತಿಸಲಾಗಿದೆ. ಎಲ್ಲಾ ಮುದ್ದೆ ಮಾಲುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿ ಇರುತ್ತದೆ. ಸ್ಥಳದಲ್ಲಿ ಬಿದ್ದಿದ್ದ ಮೋಟಾರ್ ಸೈಕಲ್ ಅಮಾನತು ಪಡಿಸಿಕೊಂಡೆ. ಈ ಬಗ್ಗೆ ಘಟನಾ ಸ್ಥಳದಲ್ಲಿ ಇದ್ದ ವಸ್ತು ಸ್ಥಿತಿಯ ಬಗ್ಗೆ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ.3 ರಿಂದ 14 ಎಂದು ಗುರುತಿಸಲಾಗಿದೆ. ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಸಾಗಿಸಿರುತ್ತೇನೆ.

6. ನಂತರ ಕೃತ್ಯಕ್ಕೆ ಬಳಸಿದ ಕಾರನ್ನು ಪತ್ತೆ ಮಾಡಲಿಕ್ಕೆ HC 313 ಮಹೇಶ್ ರವರನ್ನು ನೇಮಿಸಿರುತ್ತೇನೆ. ಸದರಿಯವರು ನನಗೆ ರಾತ್ರಿ 11.15 ಕ್ಕೆ ಫೋನ್ ಮಾಡಿ ಕಾರ್ ನಂಬರ್ KA-05-ME-5094 ಇದು ಕುದರಗುಂಡಿಗೆ ಹೋಗುವ ರಸ್ತೆಯಲ್ಲಿ ಇರುತ್ತದೆ ಎಂದು ಹೇಳಿರುತ್ತಾರೆ. ಆದ್ದರಿಂದ ನಾನು ಸದರಿ ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಹೋಗಿ ಪಂಚರಿಗೆ ವಿಚಾರ ತಿಳಿಸಿ ನೋಟೀಸ್ ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.41 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.41(ಬಿ) ಎಂದು ಗುರುತಿಸಲಾಯಿತು.

7. ನಾನು ಸದರಿ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮದಲ್ಲಿ ಪರಿಶೀಲಿಸಲಾಗಿ ಅದು ಕಪ್ಪು ಬಣ್ಣದ ಮಾರುತಿ swift VDI Car ಆಗಿತ್ತು. ಅದರ ನಂಬರ್ KA-05-ME-5094 ಇತ್ತು. ಕಾರಿನ ಮುಂಭಾಗದ ಎಡ ಚಕ್ರ ಪಂಚರ್ ಆಗಿತ್ತು. ಕಾರಿನ ಚಕ್ರವು ಸಂಪೂರ್ಣವಾಗಿ ಹರಿದು ಹಾಳಾಗಿತ್ತು. ಆ ಬಗ್ಗೆ ಸ್ಥಳದಲ್ಲಿ ರಾತ್ರಿ 11.30 ರಿಂದ 12.00 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.42 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.42(ಸಿ) ಎಂದು ಗುರುತಿಸಲಾಯಿತು.

8. ನಂತರ ಕಚೇರಿಗೆ ವಾಪಾಸ್ಸಾಗಿ ಠಾಣಾ ಮಾಲು ಪಟ್ಟಿ ಸಂಖ್ಯೆ 113/2021 ಮತ್ತು 114/2021 ರಲ್ಲಿ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಪಂಚರಾದ ಚಾಸಾ.10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 11.05.2021 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಮಂಡ್ಯ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಬೇಟಿ ಕೊಟ್ಟು ಮೃತ ಹೇಮಂತ್ ಕುಮಾರ್ ನ ಶವದ ತನಿಖೆಯನ್ನು ನಡೆಸಲು ಸಾಕ್ಷಿದಾರರಾದ ಚಾಸಾ.12 ರಿಂದ 14 ರವರನ್ನು ಬರ ಮಾಡಿಕೊಂಡು ಬೆಳಗ್ಗೆ 9.00 ಗಂಟೆಯಿಂದ 11.00 ಗಂಟೆವರೆಗೆ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ.

9. ಶವದ ಮೈ ಮೇಲೆ ಕಂಡು ಬಂದ ಗಾಯಗಳನ್ನು ಶವ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಮೃತನ ಮರಣೋತ್ತರ ಪರೀಕ್ಷೆ ಆದ ನಂತರ ಆತನ ಮೈ ಮೇಲಿನ ಬಟ್ಟೆಗಳನ್ನು ತಂದು ಹಾಜರುಪಡಿಸಲು HC 207 ಮಂಜುನಾಥ್ ರವರಿಗೆ ನಿರ್ದೇಶನ ಕೊಟ್ಟಿರುತ್ತೇನೆ. ಸದರಿ ಶವ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.45(ಬಿ) ಎಂದು ಗುರುತಿಸಲಾಯಿತು. ಅದೇ ವೇಳೆಯಲ್ಲಿ ರಕ್ತ ಸಂಬಂಧಿ ಮತ್ತು ಇತರೆ ಸಾಕ್ಷಿದಾರರಾದ ಚಾಸಾ.5 ಮತ್ತು 15 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ಕಾಲಕ್ಕೆ ನಾನು ಶವದ ಫೋಟೋಗಳನ್ನು ನಿಪಿ.15 ರಿಂದ 19 ರಂತೆ ತೆಗೆದಿರುತ್ತೇನೆ.

10. ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ವೈದ್ಯಾಧಿಕಾರಿಗಳಿಗೆ HC 207 ಮಂಜುನಾಥ್ ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರು ಅದೇ ದಿನ ಶವವನ್ನು ವೈದ್ಯಾದಿಕಾರಿಗಳಿಂದ ಮರಣೋತ್ತರ ಪರೀಕ್ಷೆ ಮಾಡಿಸಿ ವಾರಸುದಾರರಿಗೆ ಒಪ್ಪಿಸಿರುತ್ತೇನೆ ಎಂದು ವರದಿ ಮಾಡಿರುತ್ತಾರೆ. ಅದೇ ದಿನ ಪಿರ್ಯಾದಿ ಶ್ರೀಕಂಠರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಅದೇ ದಿನ ಪ್ರತ್ಯಕ್ಷ ಸಾಕ್ಷಿದಾರರಾದ ರವಿರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಅದೇ ದಿನ ಗಾಯಾಳು ಸಾಕ್ಷಿ ಸುನೀಲ್ ಕುಮಾರ್ ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ಅವರು ನನ್ನ ಮುಂದೆ ನಿಪಿ.30 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

11. ದಿನಾಂಕ 12.05.2021 ರಂದು ಈ ಪ್ರಕರಣದ ಸಾಕ್ಷಿದಾರರಾದ ಅಭಿನಯ / ಚಾಸಾ.4 ರವರನ್ನು ವಿಚಾರಣೆ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ದಿನಾಂಕ 13.05.2021 ರಂದು HC 207 ರವರು ವೈದ್ಯಾಧಿಕಾರಿಗಳಾದ ಪುಟ್ಟಸ್ವಾಮಿರವರು ಮೃತನ ಮರಣೋತ್ತರ ಪರೀಕ್ಷೆ ವೇಳೆಯಲ್ಲಿ ತೆಗೆದಿರಿಸಿದ ಮೃತನ ಬಟ್ಟೆಗಳನ್ನು ಸೇರಿ ಒಟ್ಟು 13 ವಸ್ತುಗಳನ್ನು ತಂದು ಹಾಜರು ಪಡಿಸಿದ್ದು ನಾನು ಅವುಗಳನ್ನು ಸ್ವೀಕರಿಸಿ ಅವುಗಳ ಬಗ್ಗೆ ಮಾಲು ಪಟ್ಟಿ ಸಂಖ್ಯೆ 116/2021 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

12. ಮೃತನ ಬಟ್ಟೆಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು 4 ರಿಂದ 8 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಮೃತನ ಬಾಬ್ತು

ಮರಣೋತ್ತರ ಪರೀಕ್ಷಾ ವರದಿಯನ್ನು HC 207 ರವರು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.85 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.85(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ HC 207 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

13. ದಿನಾಂಕ 16.05.2021 ರಂದು ತನಿಖೆ ಮುಂದುವರೆಸಿದ್ದು ಆರೋಪಿಗಳ ಪತ್ತೆ ಬಗ್ಗೆ ನೇಮಿಸಿದ್ದ ಪಿ.ಎಸ್.ಐ ಮೋಹನ್ ಪಟೇಲ್, ಹೆಚ್.ಸಿ. ಶಿವಕುಮಾರ್, ಪಿ.ಸಿ. ಗುರುಪ್ರಸಾದ್, ಪಿ.ಸಿ. ಚಿರಂಜೀವಿ ಇವರು ಸಂಜೆ 6.00 ಗಂಟೆ ಸಮಯದಲ್ಲಿ ಮುದಗೆರೆ ಗೇಟ್ ಸಮೀಪ KA-11-EL-5557 Pulser Bike ಸಮೇತ ಆರೋಪಿ 1 ಇಂದು ಕುಮಾರ್, ಆರೋಪಿ 5 ಪ್ರಸಾದ್ ಮತ್ತು ಆರೋಪಿ 6 ಸ್ವರೂಪ್ ಗೌಡ ಇವರುಗಳನ್ನು ಹಿಡಿದು ತಂದು ನನ್ನ ಮುಂದೆ ಹಾಜರುಪಡಿಸಿ ನಿಪಿ.105 ರಂತೆ ವರದಿ ನೀಡಿರುತ್ತಾರೆ. ನಿಪಿ.105 ರ ಮೇಲೆ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ.105(ಬಿ) ಎಂದು ಗುರುತಿಸಲಾಯಿತು.

14. ನಂತರ ಆರೋಪಿಗಳನ್ನು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಣೆ ಮಾಡಿದ್ದೇನೆ. ಹಾಗೆ ವಿಚಾರಣೆ ಮಾಡಿದಾಗ ಆರೋಪಿ 1 ಇಂದುಕುಮಾರ್ ರವರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ನಾನು ವಳಗೆರೆಹಳ್ಳಿ ಸುನೀಲ್ ಕುಮಾರ್ ಎನ್ನುವವರ ಹೆಸರಿನಲ್ಲಿ ಹಾಲಿನ ಕ್ಯಾನ್ ಗಳನ್ನು ತುಂಬಿಕೊಂಡು ಬರಲು KMF ನಲ್ಲಿ ಟೆಂಡರನ್ನು ಆನ್ ಲೈನ್ ಮುಖಾಂತರ ತೆಗೆದುಕೊಂಡಿದ್ದೆ ಎಂದು ನನ್ನ ಮುಂದೆ ಹೇಳಿರುತ್ತಾರೆ. ನಂತರ KMF ನಿಂದ ಜನವರಿ 2020 ರಲ್ಲಿ ಹಾಲಿನ ಡೈರಿ ರೂಟ್ ಗೆ ಟೆಂಡರ್ ಕಾಲ್ ಮಾಡಿದ್ದು ನನ್ನ ರೂಟ್ ಗೆ ಹೇಮಂತ್ ಕುಮಾರ, ಪವನ್ ಕುಮಾರ್ ಕಡೆಯಿಂದ ಕಡಿಮೆ ದುಡ್ಡಿಗೆ ಟೆಂಡರ್ ಹಾಕಿಸಿಕೊಂಡು 2020 ಜೂನ್ ನಿಂದ ಪವನ್ ಕುಮಾರ್ ನನ್ನ ರೂಟ್ ಗೆ ಅವನ ಕ್ಯಾಂಟರ್ ನಲ್ಲಿ ಹಾಲನ್ನು ಸಂಗ್ರಹಿಸಿ KMF ಡೈರಿಗೆ ಹಾಕುತ್ತಿದ್ದ.

15. ಆಗ ನಾನು ಪವನನಿಗೆ ಯಾಕೆ ನನ್ನ ರೂಟ್ ಗೆ ಟೆಂಡರ್ ತೆಗೆದುಕೊಂಡಿದ್ದೀಯಾ ಎಂದು ಕೇಳಿದಾಗ ಅದು ನನ್ನ ಇಷ್ಟ ನೀನು ಯಾರು ಕೇಳೋದಿಕ್ಕೆ ಅಂತ ಹೇಳಿದ. ಈ

ವಿಚಾರದಲ್ಲಿ ನನಗೂ ಮತ್ತು ಪವನನಿಗೂ ಮನಸ್ತಾಪ ಇತ್ತು ಎಂದು ಹೇಳಿರುತ್ತಾನೆ. ನಂತರ ಈಗ್ಗೆ ಸುಮಾರು 8 ತಿಂಗಳ ಹಿಂದೆ ನನಗೂ ಮತ್ತು ಪವನನಿಗೂ ಇದೇ ವಿಚಾರದಲ್ಲಿ ಜಗಳವಾಗಿದ್ದು ಆಗ ಹೇಮಂತಕುಮಾರ ಪವನನ ಪರವಾಗಿ ಬಂದಿದ್ದ, ಆಗ ನಾನು ಪವನ್ ಕುಮಾರನ ಮನೆಯ ಮುಂದೆ ನಿಂತಿದ್ದ ಅವರ ಕಾರಿಗೆ ಕಲ್ಲನ್ನು ಎತ್ತಿ ಹಾಕಿದ್ದೆ, ಈ ವಿಚಾರವಾಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದು ಹೇಳಿರುತ್ತಾನೆ.

16. ಆರೋಪಿ ಇಂದುಕುಮಾರ ಮುಂದುವರೆದು ದಿನಾಂಕ 09.05.2021 ರಂದು ಸಂಜೆ 7.45 ಸುಮಾರಿಗೆ ನಾನು ಮತ್ತು ಪುಟ್ಟ ನಮ್ಮ ಊರಿನ ವಿಶ್ವೇಶ್ವರಯ್ಯ ಮೂರ್ತಿ ಬಳಿ ಇದ್ದಾಗ ನಮ್ಮ ಊರಿನ ಶಿವಣ್ಣರವರ ಮಗ ಜಿ.ಎಸ್.ಸಂತೋಷ್ ಬಂದು ನಮ್ಮ ಊರಿನಲ್ಲಿ ಪ್ರೀಮಿಯಮ್ ಕ್ರಿಕೆಟ್ ಮ್ಯಾಚ್ ನಡೆಸುತ್ತಿದ್ದೀರಾ ಅಂತ ಕೇಳಿದ, ಆಗ ನಾನು ಲಾಕ್ ಡೌನ್ ಇರುವುದರಿಂದ ಆಗುವುದಿಲ್ಲ ಎಂದು ತಿಳಿಸಿದೆ. ಲಾಕ್ ಡೌನ್ ಮುಗಿದ ಮೇಲೆ 10 ಟೀಮ್ ಆಗಿವೆ ಲಾಕ್ ಡೌನ್ ಆದ ನಂತರ ನಡೆಸುತ್ತೇವೆ ಎಂದು ಹೇಳಿದ. ಆಗ ಸಂತೋಷ್ ಕುಮಾರ್ ನಾವು ಕ್ರಿಕೆಟ್ ಮ್ಯಾಚ್ ನಡೆಯಲು ಬಿಡುವುದಿಲ್ಲ ಅಂತ ಹೇಳಿದ, ಆಗ ನನಗೂ ಸಂತೋಷನಿಗೂ ಮಾತಿಗೆ ಮಾತು ಬೆಳೆದು ಜಗಳವಾಯಿತು. ಆಗ ಅಲ್ಲೇ ಇದ್ದ ನಮ್ಮ ಊರಿನ ಮೋಹನ್ ಹಾಗೂ ತಮ್ಮೇಗೌಡ ಜಗಳ ಬಿಡಿಸಿ ಕಳುಹಿಸಿರುತ್ತಾರೆ ಎಂದು ಹೇಳಿದ.

17. ನಂತರ ನನಗೂ ಮತ್ತು ಸಂತೋಷಕುಮಾರನಿಗೂ ಜಗಳವಾದ ವಿಚಾರ ತಿಳಿದ ಮೃತ ಹೇಮಂತ್ ಕುಮಾರ್ ಅಲ್ಲಿಗೆ ಬಂದು ವಿಚಾರಣೆ ಮಾಡಲು ಬಂದಾಗ ನನಗೂ ಮತ್ತು ಹೇಮಂತ್ ಕುಮಾರನಿಗೂ ಮಾತಿಗೆ ಮಾತು ಬೆಳೆಯಿತು ನಂತರ ಅಲ್ಲೆ ಇದ್ದ ಮೋಹನ್ ಹಾಗೂ ತಮ್ಮೇಗೌಡ ಜಗಳ ಬಿಡಿಸಿ ಕಳುಹಿಸಿರುತ್ತಾರೆ ಎಂದು ಹೇಳಿದ. ಆಗ ನಾನು ಅಲ್ಲೇ ಇದ್ದ ಪವನಕುಮಾರನಿಗೆ ನೀನು ಗೆದ್ದು ಹೋಗಿದ್ದೀಯಾ ಇನ್ನೂ 2-3 ದಿನ ನೋಡು ಹೇಮಂತ್ ಕುಮಾರ್ ನನ್ನು ಮುಗಿಸುತ್ತೇನೆ ಎಂದು ಹೇಳಿ ಅಲ್ಲಿಂದ ಹೊರಟು ಹೋದನು ಎಂದು ತಿಳಿಸಿದನು. ನಂತರ ನಾನು ಅದೇ ದಿನ ನಮ್ಮ ಊರಿನ ಹೇಮಂತಕುಮಾರ ಒಂದಲ್ಲ ಒಂದು ರೀತಿಯಲ್ಲಿ ತೊಂದರೆ ಕೊಡುತ್ತಿದ್ದಾನೆ ಅವನನ್ನು ಏನಾದರೂ ಮಾಡಿ ಮುಗಿಸಬೇಕು ಅಂದುಕೊಂಡೆ ಎಂದು ಹೇಳಿದ. ನಂತರ ನಾನು ಹಾಗೂ ನನ್ನ ಸ್ನೇಹಿತರಾದ ಪುಟ್ಟ, ಮಧು, ನಾಗ, ಅವಿನಾಶ್ ರವರು ಕಾರಿನಲ್ಲಿ

ಹೋಗಿ ಹಿಂದಿನಿಂದ ಮಹಾದೇವ ಬೈಕ್ ನಲ್ಲಿ ಬರುತ್ತೇನೆ ಎಂದು ಹೇಳಿದ ಎಂದು ಹೇಳಿದನು. ನಂತರ ನಾವುಗಳೆಲ್ಲಾ ಕಾರಿನಲ್ಲಿ ಗೆಜ್ಜಲಗೆರೆ KMF ನ ಎದುರು ಇರುವ 23 ನೇ ಕಾಲುವೆಯ ಏರಿಯಾ ರಸ್ತೆಗೆ ಹೋಗಿ ಒಂದು ಹೊಂಗೆ ತೋಪಿನ ಬಳಿ ಕಾರನ್ನು ನಿಲ್ಲಿಸಿದೆವು ಎಂದು ಹೇಳಿದ .

18. ಆರೋಪಿ 1 ಮುಂದುವರೆದು ಉಳಿದವರು ಅಲ್ಲಿಗೆ ಬಂದರು ಎಂದು ಹೇಳಿದ. ಆ ಸಮಯದಲ್ಲಿ ಅಲ್ಲಿಗೆ ನಮ್ಮ ಊರಿನ ಅಭಿನಯ ಅಲ್ಲೆ ನಡೆದುಕೊಂಡು ಹೋಗುತ್ತಿದ್ದು ನಾವು ಏನು ಮಾತನಾಡುತ್ತಿದ್ದೇವೆ ಎಂದು ಕೇಳಿಸಿಕೊಳ್ಳಲು ನಿಂತನು. ಆಗ ನಾವೆಲ್ಲ ಅವನನ್ನು ಹೆದರಿಸಿ ಕಳುಹಿಸಿದೆವು. ಅದರಂತೆ ದಿನಾಂಕ 10.05.2021 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಹೇಮಂತ್ ಕುಮಾರ ಮತ್ತು ಸುನೀಲ್ ಹೋಗುತ್ತಿದ್ದ ಮೋಟಾರ್ ಸೈಕಲ್ ಹಿಂಭಾಗಕ್ಕೆ ಕಾರಿನಿಂದ ಗುದ್ದಿಸಿ ಕೆಳಗೆ ಬೀಳಿಸಿದರು. ಮಧು ತಂದಿದ್ದ 2 ಲಾಂಗ್ ಗಳ ಪೈಕಿ ಒಂದು ಲಾಂಗನ್ನು ಮಧು ಇನ್ನೊಂದು ಲಾಂಗನ್ನು ಅಭಿಷೇಕ್ ತೆಗೆದುಕೊಂಡು ಮತ್ತು ಇನ್ನೊಂದು ಡ್ರ್ಯಾಗರ್ ನಿಂದ ಹತ್ಯೆ ಮಾಡಿರುತ್ತೇವೆ ಅಂತ ಹೇಳಿದ.

19. ಆರೋಪಿ 1 ಮುಂದುವರೆದು ನನ್ನ ಜೊತೆ ಬಂದರೆ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ, ನಾವು ಹೇಮಂತ್ ಕುಮಾರನನ್ನು ಕೊಲೆ ಮಾಡಿದ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ಆಯುಧ ಮತ್ತು ನಮ್ಮ ಬಟ್ಟೆ , ಮೊಬೈಲ್ ಫೋನ್ ಬಚ್ಚಿಟ್ಟಿರುವ ಸ್ಥಳವನ್ನು ತೋರಿಸುತ್ತೇನೆ ಅಂತ ಹೇಳಿದ. ಸದರಿ 1 ನೇ ಆರೋಪಿ ಕೊಟ್ಟಿರುವ ಸ್ವಇಚ್ಚಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ.108 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.108(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ಸಹಿಯನ್ನು ನಿಪಿ.108(ಬಿ) ಎಂದು ಗುರುತಿಸಲಾಯಿತು.

20. ಅದೇ ರೀತಿಯಾಗಿ ಆರೋಪಿ 5 ಮತ್ತು 6 ರವರು ಕೂಡ 1 ನೇ ಆರೋಪಿ ಹೇಳಿದ ರೀತಿಯಲ್ಲಿಯೇ ತಮ್ಮ ಸ್ವಇಚ್ಚಾ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಅವರು ಕೂಡ ನಮ್ಮ ಜೊತೆ ಬಂದರೆ ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ, ನಾವು ಹೇಮಂತ್ ಕುಮಾರನನ್ನು ಕೊಲೆ ಮಾಡಿದ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ಆಯುಧ ಮತ್ತು ನಮ್ಮ

ಬಟ್ಟೆ, ಮೊಬೈಲ್ ಫೋನ್ ಬಚ್ಚಿಟ್ಟಿರುವ ಸ್ಥಳವನ್ನು ತೋರಿಸುತ್ತೇವೆ ಅಂತ ಹೇಳಿದರು. 5 ನೇ ಆರೋಪಿ ಪ್ರಸಾದ್ ಕೊಟ್ಟಿರುವ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ.109 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.109(ಎ) ಎಂದು ಗುರುತಿಸಲಾಯಿತು. 5 ನೇ ಆರೋಪಿ ಸಹಿಯನ್ನು ನಿಪಿ.109(ಬಿ) ಎಂದು ಗುರುತಿಸಲಾಯಿತು. 6 ನೇ ಆರೋಪಿ ಸ್ವರೂಪ್ ಗೌಡ ಕೊಟ್ಟಿರುವ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ.110 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.110(ಎ) ಎಂದು ಗುರುತಿಸಲಾಯಿತು. 6 ನೇ ಆರೋಪಿ ಸಹಿಯನ್ನು ನಿಪಿ.110(ಬಿ) ಎಂದು ಗುರುತಿಸಲಾಯಿತು.

21. ಅದೇ ದಿನ ಆರೋಪಿಗಳ ಸಮೇತ ವಶಕ್ಕೆ ಪಡೆದುಕೊಂಡಿದ್ದ ಬೈಕ್ KA-11-EL-5557 ವಾಹನವನ್ನು ನಿಪಿ.46 ಮಹಜರ್ ಅಡಿಯಲ್ಲಿ ಪಂಚರಾದ ರವಿ ಮತ್ತು ನಾಗಣ್ಣ ಇವರ ಸಮಕ್ಷಮದಲ್ಲಿ ಮಹಜರ್ ಪ್ರಕ್ರಿಯೆ ಜರುಗಿಸಿ ಸದರಿ ವಾಹನವನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ನಿಪಿ.46 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿಪಿ.46(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ.47 ಮತ್ತು 48 ರಂತೆ 2 ಫೋಟೋಗಳನ್ನು ತೆಗೆಯಲಾಗಿದೆ. ನಂತರ ಪಂಚರಾದ ರವಿ ಮತ್ತು ನಾಗಣ್ಣ ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

(ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ..

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

**ಎಸ್ ಸಿ ಕೇಸ್ ನಂ. 121/2021 CW.54, PW.32**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 12.08.2026 ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

22. ಅದೇ ದಿನ 1 ನೇ ಆರೋಪಿ ಇಂದುಕುಮಾರ್ ವಿರುದ್ಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪವನ್ ಕುಮಾರ್ ರವರು ನೀಡಿದ ದೂರಿನ ಮೇಲೆ ಮೊಕದಮ್ಮೆ ಸಂಖ್ಯೆ 225/2020 ಕಲಂ 427, 504, 354, 323, 324, 506 ಐ.ಪಿ.ಸಿ ಅಡಿಯಲ್ಲಿ ದಾಖಲಾಗಿದ್ದ ಪ್ರಥಮ ವರ್ತಮಾನ ವರದಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.111 ಎಂದು ಗುರುತಿಸಲಾಯಿತು.

23. ದಿನಾಂಕ 17.05.2021 ರಂದು ತನಿಖೆ ಮುಂದವರೆಸಿ ಈ ಪ್ರಕರಣದ ಗಾಯಾಳು ಸಾಕ್ಷಿ ಹಾಗೂ ಆರೋಪಿತರ ಸ್ವಇಚ್ಛೆ ಹೇಳಿಕೆಯ ಅನುಸಾರವಾಗಿ ಹೆಚ್ಚುವರಿಯಾಗಿ ಕಲಂ 143, 147, 148, 120(ಬಿ), 149 ಐ.ಪಿ.ಸಿ. ಕಲಂ ಗಳನ್ನು ಅಳವಡಿಸಿಕೊಳ್ಳಲು ಘನ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತೇನೆ. ನಂತರ ಅದೇ ದಿನ ಆರೋಪಿತರ ಪತ್ತೆಗಾಗಿ ನೇಮಿಸಿದ್ದ PSI ಮೋಹನ್ ಬಿ ಪಟೇಲ್, HC 28, PC 347, PC 540 ರವರ ಮಾಹಿತಿ ಮೇರೆಗೆ ಆರೋಪಿತರಾದ ಮಧು ಅಲಿಯಾಸ್ ಕಪ್ಪೆ, ನಾಗರಾಜು ಅಲಿಯಾಸ್ ನಾಗ, ಮಹಾದೇವ, ಅವಿನಾಶ್ ಅಲಿಯಾಸ್ ಇಡ್ಲಿ ಇವರನ್ನು ಬೆಳಗ್ಗೆ 5.00 ಗಂಟೆ ಸಮಯದಲ್ಲಿ ಮುದುಗೆರೆ ಸಮೀಪ ಇರುವ ಮಾವಿನ ತೋಪಿನಲ್ಲಿ KA-11-Y-9184 passion pro Bike ಹಾಗೂ KA-42-V-9575 Discover Bike ಸಮೇತ ವಶಕ್ಕೆ ಪಡೆದು ನನ್ನ ಮುಂದೆ ಬೆಳಗ್ಗೆ 6.00 ಗಂಟೆಗೆ ಹಾಜರು ಪಡಿಸಿದ್ದು ಅವರ ನೀಡಿದ ವರದಿಯನ್ನು ಪಡೆದು ಸದರಿಯವರ ಹೇಳಿಕೆ ಪಡೆದುಕೊಂಡಿದ್ದೇನೆ.

24. ಸದರಿ ಮೋಹನ್ ಬಿ. ಪಟೇಲ್ ರವರು ನೀಡಿದ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.106 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.106(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ಅವರನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಿ ಅವರ ಸ್ವಇಚ್ಛಾ ಹೇಳಿಕೆಯನ್ನು

ಪಡೆದುಕೊಂಡಿದ್ದೇನೆ. ಮಧು ಇವರು ನನ್ನ ಮುಂದೆ ನನ್ನ ಜೊತೆಯಲ್ಲಿ ಬಂದರೆ ಹೇಮಂತ್ ಕುಮಾರ ನನ್ನು ಕೊಲೆ ಮಾಡಿದ ಸ್ಥಳ, ಸಂಚು ರೂಪಿಸಿದ ಸ್ಥಳ, ಆಯುಧ ಮತ್ತು ಬಟ್ಟೆಗಳನ್ನು ಬಚ್ಚಿಟ್ಟ ಸ್ಥಳ ತೋರಿಸುತ್ತೇನೆ ಎಂದು ಹೇಳಿರುತ್ತಾರೆ.

25. ಈಗ ನಾನು ಮಧುರವರು ನೀಡಿದ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನೋಡುತ್ತಿದ್ದು ಅದನ್ನು ನಿಪಿ.112 ಎಂದು, ಸಾಕ್ಷಿಯ ಸಹಿಯನ್ನು ನಿಪಿ.112(ಎ) ಎಂದು ಗುರುತಿಸಲಾಯಿತು. ಆರೋಪಿ ಮಧುರವರ ಸಹಿಯನ್ನು ನಿಪಿ.112(ಬಿ) ಎಂದು ಗುರುತಿಸಲಾಯಿತು. ಈಗ ನಾನು ನಾಗರಾಜುರವರು ನೀಡಿದ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನೋಡುತ್ತಿದ್ದು ಅದನ್ನು ನಿಪಿ.113 ಎಂದು, ಸಾಕ್ಷಿಯ ಸಹಿಯನ್ನು ನಿಪಿ.113(ಎ) ಎಂದು ಗುರುತಿಸಲಾಯಿತು. ಆರೋಪಿ ನಾಗರಾಜುರವರ ಸಹಿಯನ್ನು ನಿಪಿ.113 (ಬಿ) ಎಂದು ಗುರುತಿಸಲಾಯಿತು.

26. ಈಗ ನಾನು ಮಹಾದೇವ ರವರು ನೀಡಿದ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನೋಡುತ್ತಿದ್ದು ಅದನ್ನು ನಿಪಿ.114 ಎಂದು, ಸಾಕ್ಷಿಯ ಸಹಿಯನ್ನು ನಿಪಿ.114(ಎ) ಎಂದು ಗುರುತಿಸಲಾಯಿತು. ಆರೋಪಿ ಮಹಾದೇವರವರ ಸಹಿಯನ್ನು ನಿಪಿ.114(ಬಿ) ಎಂದು ಗುರುತಿಸಲಾಯಿತು. ಈಗ ನಾನು ಅವಿನಾಶ್ ರವರು ನೀಡಿದ ಸ್ವಇಚ್ಛಾ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನೋಡುತ್ತಿದ್ದು ಅದನ್ನು ನಿಪಿ.115 ಎಂದು, ಸಾಕ್ಷಿಯ ಸಹಿಯನ್ನು ನಿಪಿ.115(ಎ) ಎಂದು ಗುರುತಿಸಲಾಯಿತು. ಆರೋಪಿ ಅವಿನಾಶ್ ರವರ ಸಹಿಯನ್ನು ನಿಪಿ.115(ಬಿ) ಎಂದು ಗುರುತಿಸಲಾಯಿತು.

27. ನಂತರ ತನಿಖಾ ಕಾಲದಲ್ಲಿ ಹಾಜರಿರಲು ಇಬ್ಬರು ಪಂಚರಿಗೆ ಕಳುಹಿಸಿಕೊಡುವಂತೆ ತಹಶೀಲ್ದಾರ್ ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಅವರು ಇಬ್ಬರು ಪಂಚರನ್ನು ನೇಮಿಸಿ ಆದೇಶ ಮಾಡಿರುತ್ತಾರೆ. ಈಗ ನಾನು ಕೋರಿಕೆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.116 ಎಂದು, ಸಾಕ್ಷಿಯ ಸಹಿಯನ್ನು ನಿಪಿ.116(ಎ) ಎಂದು ಗುರುತಿಸಲಾಯಿತು. ತಹಶೀಲ್ದಾರ್ ರವರು ಇಬ್ಬರು ಪಂಚರನ್ನು ನೇಮಿಸಿ ಮಾಡಿದ ಆದೇಶವನ್ನು ನೋಡುತ್ತಿದ್ದು ಅದನ್ನು ನಿಪಿ.117 ಎಂದು, ಸಾಕ್ಷಿಯ ಸಹಿಯನ್ನು ನಿಪಿ.117(ಎ) ಎಂದು ಗುರುತಿಸಲಾಯಿತು.

28. ನಂತರ ಅದೇ ದಿನ ಆರೋಪಿತರ ಜೊತೆ ವಶಕ್ಕೆ ಪಡೆದುಕೊಂಡಿದ್ದ 2 ಬೈಕ್ ಗಳನ್ನು ಪಂಚರಾದ ಚಾಸಾ.18 ಮತ್ತು 19 ರವರ ಸಮಕ್ಷಮದಲ್ಲಿ ನಿಪಿ.49 ರಂತೆ ಬೆಳಗ್ಗೆ 9.45 ರಿಂದ 10.45 ರವರೆಗೆ ಮಹಜರ್ ಮಾಡಿ ಅಮಾನತು ಮಾಡಿಕೊಂಡಿರುತ್ತೇನೆ. ನಿಪಿ.49 ರಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ.49(ಬಿ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ನಮ್ಮ ಸಿಬ್ಬಂದಿಯವರಿಗೆ ತನಿಖಾ ಸಂಬಂಧ ಒದಗಿಸಿದ್ದ ಕ್ಯಾಮೇರಾದಿಂದ 2 ಫೋಟೋಗಳನ್ನು ತೆಗೆದಿರುತ್ತೇವೆ.

29. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.50 ಮತ್ತು 51 ಎಂದು ಗುರುತಿಸಲಾಗಿದೆ. ಸದರಿ ಫೋಟೋಗಳಲ್ಲಿರುವ ದ್ವಿಚಕ್ರ ವಾಹನಗಳನ್ನೇ ನಾನು ವಶಪಡಿಸಿಕೊಂಡಿರುತ್ತೇನೆ. ನಂತರ ವಶಪಡಿಸಿಕೊಂಡ ವಾಹನಗಳನ್ನು ಮಾಲು ಪಟ್ಟಿ ಸಂಖ್ಯೆ 124/2021 ರಲ್ಲಿ ನೊಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ.

30. ನಂತರ ಅದೇ ದಿನ ಚಾಸಾ.18 ಮತ್ತು 19 ಹಾಗೂ ಆರೋಪಿಗಳಾದ ಇಂದುಕುಮಾರ್, ಮಧು, ನಾಗರಾಜ, ಸ್ವರೂಪ್, ಮಹಾದೇವ ಮತ್ತು ಅವಿನಾಶ್ ರವರನ್ನು ಪಂಚರಿಗೆ ಪರಿಚಯಿಸಿದೆನು. ಸದರಿಯವರಿಗೆ ಆರೋಪಿಗಳು ನೀಡಿರುವ ಸ್ವಇಚ್ಛಾ ಹೇಳಿಕೆ ಬಗ್ಗೆ ವಿವರಿಸಿ ಹೇಳಿ ಪಂಚನಾಮೆ ಮಾಡುವ ಕಾಲಕ್ಕೆ ಪಂಚರಾಗಿ ಹಾಜರಿರುವಂತೆ ಕೋರಿಕೊಂಡೆನು. ನಂತರ ನಾನು, ಪಂಚರು, ಸಿಬ್ಬಂದಿಯವರು ಮತ್ತು ಆರೋಪಿತರ ಜೊತೆ 2 ಸರ್ಕಾರಿ ವಾಹನದಲ್ಲಿ ನಮ್ಮ ಕಚೇರಿಯಿಂದ ಹೊರಟೆವು.

31. ನಮ್ಮ ವಾಹನದಲ್ಲಿ ಪಂಚರು, ತನಿಖಾ ಸಹಾಯಕರು ಹಾಗೂ ಇಬ್ಬರು ಆರೋಪಿತರು ಇದ್ದರು. ಇನ್ನೊಂದು ಸರ್ಕಾರಿ ವಾಹನದಲ್ಲಿ ಉಳಿದ ಆರೋಪಿತರು ಮತ್ತು ಸಿಬ್ಬಂದಿಯವರು ಇದ್ದರು. ಆರೋಪಿತರಾದ ಇಂದುಕುಮಾರ್ ಮತ್ತು ಮಧುರವರು ನಮ್ಮ ವಾಹನದಲ್ಲಿ ಕುಳಿತು ದಾರಿ ತೋರಿಸಿರುತ್ತಾರೆ. ಅವರು ಮೊದಲು ಹೇಮಂತ್ ಕುಮಾರನನ್ನು ಕೊಲೆ ಮಾಡಿದ ಸ್ಥಳವಾದ ಗೆಜ್ಜಲಗೆರೆ ಗ್ರಾಮಕ್ಕೆ ಕರೆದುಕೊಂಡು ಹೋಗಿ ಒಂದು ಸ್ಥಳವನ್ನು ತೋರಿಸಿದ್ದು ಅದೇ ಸ್ಥಳದಲ್ಲಿ ಹೇಮಂತ್

ಕುಮಾರ್ ನನ್ನು ಕೊಲೆ ಮಾಡಿರುತ್ತೇವೆ ಎಂದು ತೋರಿಸಿರುತ್ತಾರೆ. ಸದರಿ ಸ್ಥಳವು ಈ ಹಿಂದೆ ಪಿರ್ಯಾದಿದಾರರು ತೋರಿಸಿದ ಸ್ಥಳವಾಗಿತ್ತು.

32. ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಸದರಿ ಸ್ಥಳದಲ್ಲಿ ರಕ್ತದ ಕಲೆ ಇದ್ದು ರಕ್ತದ ಕಲೆ ಒಣಗಿ ಕಪ್ಪಾಗಿರುವುದು ಕಂಡು ಬಂತು. ಸದರಿ ಸ್ಥಳದಲ್ಲಿ ಪಂಚರಾದ ಚಾಸಾ.18 ಮತ್ತು 19 ರವರ ಸಮಕ್ಷಮ ನಿಪಿ.52 ರಂತೆ ಬೆಳಗ್ಗೆ 11.00 ರಿಂದ 11.45 ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಮಹಜರ್ ನಲ್ಲಿ ನನ್ನ ರುಜು ಇದ್ದು ಅದನ್ನು ನಾನು ಗುರುತಿಸುತ್ತೇನೆ. ಅದನ್ನು ನಿಪಿ.52(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಇಲಾಖೆಯವರು ನಮಗೆ ಒದಗಿಸಿದ ಕ್ಯಾಮೇರದ ಸಹಾಯದಿಂದ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.53 ಮತ್ತು 54 ಎಂದು ಗುರುತಿಸಲಾಗಿದೆ.

33. ಅಲ್ಲಿಂದ ಮುಂದೆ ಸದರಿ ಆರೋಪಿಗಳು ಸಂಚು ರೂಪಿಸಿದ ಸ್ಥಳವನ್ನು ತೋರಿಸುತ್ತೇವೆ ಎಂದು ಆರೋಪಿಗಳು ಮಾರ್ಗವನ್ನು ತೋರಿಸುತ್ತಾ ಸಾದೊಳಲು ಗ್ರಾಮದಿಂದ KMF Dairy ಕಡೆಗೆ ಹೋಗುವ 23 ನೇ ಕಾಲುವೆಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿಗಳು ವಾಹನವನ್ನು ನಿಲ್ಲಿಸುವಂತೆ ತಿಳಿಸಿ ಜೀಪ್ ಗಳಿಂದ ಇಳಿದು ತಾವು ಮುಂದಾಗಿ ಒಂದು ಸ್ಥಳವನ್ನು ತೋರಿಸಿ ಇದೇ ಸ್ಥಳದಲ್ಲಿ ನಾವು ಹೇಮಂತ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿರುತ್ತೇವೆ ಎಂದು ಹೇಳಿದರು.

34. ಸದರಿ ಸ್ಥಳವು ಸಾಕ್ಷಿದಾರರಾದ ಅವಿನಾಶ್ ರವರು ಹೇಳಿಕೆಯಲ್ಲಿ ಹೇಳಿರುವ ಸ್ಥಳವಾಗಿರುತ್ತದೆ. ಸದರಿ ಸ್ಥಳದಲ್ಲಿ ಪಂಚರಾದ ಚಾಸಾ.18 ಮತ್ತು 19 ರವರ ಸಮಕ್ಷಮ ನಿಪಿ.55 ರಂತೆ ಮದ್ಯಾಹ್ನ 12.00 ಗಂಟೆಯಿಂದ 12.45 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರ್ ನ ಮೇಲೆ ನನ್ನ ಸಹಿ ಇದ್ದು ಅದನ್ನು ನಿಪಿ.55(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಾನು ನಮ್ಮ ಇಲಾಖೆಯವರು ಒದಗಿಸಿದ ಕ್ಯಾಮೇರಾದಿಂದ ನಿಪಿ.56 ರಂತೆ ಫೋಟೋ ತೆಗೆಸಿರುತ್ತೇನೆ. ನಂತರ ಎಲ್ಲಾ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ. ಸದರಿ ಆರೋಪಿತರ ಪೈಕಿ ಆರೋಪಿ 1, 2, 4, 6 ಇವರನ್ನು ಮುಂದಿನ ತನಿಖೆ ಸಂಬಂಧ ಪೊಲೀಸ್ ಅಭಿರಕ್ಷೆಗೆ ಪಡೆದಿರುತ್ತೇನೆ.

35. ದಿನಾಂಕ 18.05.2021 ರಂದು ಈ ಕೇಸಿನ ತನಿಖೆ ಮುಂದುವರೆಸಿ ನಾನು ವೃತ್ತ ಕಚೇರಿಯಲ್ಲಿ ಇರುವಾಗ ಈ ಪ್ರಕರಣದ ಗಾಯಾಳುವಾದ ಸುನೀಲ್ ಕುಮಾರ್ /ಫ್ರಾಸಾ.3 ಇವರು ಘಟನೆ ನಡೆದ ದಿನ ತಾನು ಧರಿಸಿದ್ದ ಬಟ್ಟೆಗಳನ್ನು ತಂದು ಹಾಜರು ಪಡಿಸಿದ್ದು ಅವುಗಳನ್ನು ಚಾಸಾ.18 ಮತ್ತು 19 ರವರ ಸಮಕ್ಷಮದಲ್ಲಿ ನನ್ನ ಕಚೇರಿಯಲ್ಲಿ ಬೆಳಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ಮಹಜರ್ ಪ್ರಕ್ರಿಯೆ ಮಾಡಿ ಅಮಾನತು ಪಡಿಸಿಕೊಂಡಿರುತ್ತೇನೆ. ಸದರಿ ಬಟ್ಟೆಗಳು ಒಂದು ಹಳದಿ ಮತ್ತು ಕಪ್ಪು ಪಟ್ಟಿಗಳಿರುವ ಒಂದು ಟೀ ಶರ್ಟ್, ಒಂದು ಬಿಳಿ ಬಣ್ಣದ ಸ್ಯಾಂಡ್ ಬನಿಯನ್ ಮತ್ತು ಒಂದು ತಿಳಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಆಗಿರುತ್ತವೆ. ಅವುಗಳ ಮೇಲೆ ರಕ್ತದ ಕಲೆಗಳಾಗಿದ್ದವು.

36. ಸದರಿ ಬಟ್ಟೆಗಳನ್ನು ನಿಪಿ.31 ಮಹಜರ್ ಪ್ರಕಾರ ಅಮಾನತು ಮಾಡಿಕೊಂಡಿರುತ್ತೇನೆ. ಅದರ ಮೇಲೆ ಸಾಕ್ಷಿಯ ಸಹಿಯನ್ನು ನಿಪಿ.31(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಾನು ನಿಪಿ.32 ರಿಂದ 35 ರವರೆಗೆ ಇಲಾಖೆಯವರು ಒದಗಿಸಿದ ಕ್ಯಾಮೇರಾದಿಂದ ಫೋಟೋ ತೆಗೆಸಿರುತ್ತೇನೆ. ಸದರಿ ವಸ್ತುಗಳ ಮೇಲೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಅವುಗಳ ಮೇಲೆ MM ಅಕ್ಷರಗಳಿಂದ ಸೀಲ್ ಹಾಕಿರುತ್ತೇನೆ. ಸದರಿ ಬಟ್ಟೆಗಳನ್ನು ಈಗಾಗಲೇ ಮುದ್ದೆ ಮಾಲು 11 ರಿಂದ 13 ಎಂದು ಗುರುತಿಸಲಾಗಿದೆ.

37. ನಂತರ ಅದೇ ದಿನ ಗಾಯಾಳು ಸುನೀಲ್ ಕುಮಾರ್ ಇವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಅವರು ನನ್ನ ಮುಂದೆ ನಿಪಿ.30 ರಂತೆ ಹೇಳಿಕೆ ನೀಡಿರುತ್ತಾರೆ. ನಂತರ ಸದರಿ ಬಟ್ಟೆಗಳನ್ನು ಮಾಲು ಪಟ್ಟಿ ಸಂಖ್ಯೆ 126/2021 ರಲ್ಲಿ ನಮೂದಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿತರು ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದಂತೆ ನಾನು, ಪಂಚರು ಮತ್ತು ಆರೋಪಿತರು 1, 2 , 4 ಮತ್ತು 6 ರವರು ತೋರಿಸಿದ ಸ್ಥಳಕ್ಕೆ ಹೋಗಿರುತ್ತೇವೆ. ಅವರು ಮುದಗೆರೆಯಿಂದ ಸ್ವಲ್ಪ ಮುಂದೆ ಮೈಸೂರು – ಬೆಂಗಳೂರು ರಸ್ತೆಯಲ್ಲಿ ಹೋಗುತ್ತಿದ್ದಾಗ ಜೀಪನ್ನು ನಿಲ್ಲಿಸುವಂತೆ ತಿಳಿಸಿ, ಜೀಪನ್ನು ನಿಲ್ಲಿಸಿದ ನಂತರ ಜೀಪಿನಿಂದ ಪಂಚರು ಆರೋಪಿತರು ಮತ್ತು ನಾವೆಲ್ಲರು ಇಳಿದಾಗ ಆರೋಪಿಗಳು ಮುಂದು

ಮುಂದಾಗಿ ಮೈಸೂರು ಬೆಂಗಳೂರು ಹೆದ್ದಾರಿ ರಸ್ತೆಯ ಬದಿಯಲ್ಲಿ ಇದ್ದ ಖಾನ್ ಹೊಟೇಲ್ ಹಿಂಭಾಗದ ಒಂದು ಕೋಣೆಯನ್ನು ತೋರಿಸಿ ಆ ಕೋಣೆಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಬಚ್ಚಿಟ್ಟಿದ್ದ, ಆಯುಧ, ಬಟ್ಟೆ ಮತ್ತು ಮೊಬೈಲ್ ಗಳನ್ನು ತೋರಿಸಿದರು.

38. ಸದರಿ ಆಯುಧಗಳನ್ನು ನೋಡಲಾಗಿ ಒಂದು ಲಾಂಗು, ಒಂದು ಡ್ರ್ಯಾಗರ್ ಇದ್ದು ಆರೋಪಿ ಇಂದುಕುಮಾರ್ ರವರು ಲಾಂಗನ್ನು ಎತ್ತಿ ಹಾಜರು ಪಡಿಸಿ ಸದರಿ ಲಾಂಗನ್ನು ಆರೋಪಿ ಅಭಿ ಮತ್ತು ಮಧುರವರು ಹೇಮಂತನಿಗೆ ಹೊಡೆಯಲು ಉಪಯೋಗಿಸಿದ್ದು ಅಂತ ಹೇಳಿದರು. ಸದರಿ ಲಾಂಗ್ ತುದಿಯಲ್ಲಿ ರಕ್ತದ ಕಲೆ ಇತ್ತು. ನಂತರ ಆರೋಪಿ 4 ಮತ್ತು 6 ರವರು ಒಂದು ಡ್ರ್ಯಾಗರ್ ಅನ್ನು ಹಾಜರು ಪಡಿಸಿ ಸದರಿ ಡ್ರ್ಯಾಗರ್ ನಿಂದ ಮೃತನಿಗೆ ಹೊಡೆದಿದ್ದೇನೆ ಅಂತ ಹೇಳಿದರು. ಅದಕ್ಕೂ ಕೂಡ ರಕ್ತದ ಕಲೆಯಾಗಿತ್ತು. ನಂತರ ಇಂದುಕುಮಾರ್ ಇತನು ಒಂದು ನೀಲಿ ಬಣ್ಣದ ನೈಟ್ ಪ್ಯಾಂಟ್ ಮತ್ತು ಒಂದು ಬೂದು ಬಣ್ಣದ ಟೀ ಶರ್ಟ್ ಹಾಜರು ಪಡಿಸಿದ.

39. ಆರೋಪಿ ಅಭಿ ಇತನು ಒಂದು ತಿಳಿ ಸಿಮೆಂಟ್ ಬಣ್ಣದ ಅರ್ಧ ತೋಳಿನ ರೌಂಡ್ ನೆಕ್ ಟೀ ಶರ್ಟ್ ಹಾಜರು ಪಡಿಸಿದನು. ಆರೋಪಿ ನಾಗರಾಜು ಇತನು ಒಂದು ಪಾಚಿ ಕಲರ್ ನ ಟೀ ಶರ್ಟ್ ಹಾಜರು ಪಡಿಸಿರುತ್ತಾನೆ. ಆರೋಪಿ ಸ್ವರೂಪ ಇತನು ಕಪ್ಪು ಬಣ್ಣದ ಅರ್ದ ತೋಳಿನ ಟೀ ಶರ್ಟ್ ಹಾಜರು ಪಡಿಸಿರುತ್ತಾನೆ. ಆರೋಪಿ ಮಧು ಇತನು ಒಂದು ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಹಾಜರು ಪಡಿಸಿರುತ್ತಾನೆ. ಅವೆಲ್ಲವುಗಳಿಗೂ ರಕ್ತದ ಕಲೆಯಾಗಿತ್ತು. ನಂತರ ಆರೋಪಿ ಇಂದುಕುಮಾರ್ ಇವರು ಒಂದು ಒಪೋ ಕಂಪನಿಯ Gold ಬಣ್ಣದ touch screen Mobile ಹಾಗೂ ಆರೋಪಿ ಸ್ವರೂಪನು ಒಂದು ಜೀಯೋ ಕಂಪನಿಯ ಕೀ ಪ್ಯಾಡ್ ಮೊಬೈಲನ್ನು ಹಾಜರು ಪಡಿಸಿರುತ್ತಾನೆ.

40. ಈ ಎಲ್ಲಾ ವಸ್ತುಗಳನ್ನು ಬಿಳಿಯ ಬಟ್ಟೆ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ MM ಸೀಲ್ ಹಾಕಿ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಪಂಚರ ಸಮಕ್ಷಮದಲ್ಲಿ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ಬೆಳಗ್ಗೆ 11.00

ರಿಂದ 12.30 ರವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಪಿ.57 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.57(ಬಿ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ಇಲಾಖೆಯವರು ಒದಗಿಸಿದ್ದ ಕ್ಯಾಮೇರಾದಿಂದ ನಿಪಿ.58 ರಿಂದ 79 ರವರೆಗೆ ಫೋಟೋಗಳನ್ನು ತೆಗೆಸಿರುತ್ತೇನೆ.

41. ಆರೋಪಿತರ ಹೇಳಿಕೆಯಂತೆ ಪಂಚನಾಮೆ ಅಡಿಯಲ್ಲಿ ಜಪ್ತಿ ಮಾಡಿಕೊಂಡ ಒಂದು ಲಾಂಗು ಮತ್ತು ಡ್ರ್ಯಾಗರ್ ಅನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು 21, 22 ಎಂದು ಗುರುತಿಸಲಾಗಿದೆ. ಬಟ್ಟೆಗಳನ್ನು ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು 15 ರಿಂದ 20 ಎಂದು ಗುರುತಿಸಲಾಗಿದೆ. ಆರೋಪಿ –1 ಹಾಜರು ಪಡಿಸಿದ ಮೊಬೈಲ್ ಇರುವ ಚೀಲವನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು –23 ಎಂದು ಗುರುತಿಸಲಾಯಿತು.

42. ಆರೋಪಿ –6 ಸ್ವರೂಪ ಹಾಜರು ಪಡಿಸಿದ ಮೊಬೈಲ್ ಇರುವ ಚೀಲವನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅದನ್ನು ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು –24 ಎಂದು ಗುರುತಿಸಲಾಯಿತು. ಈ ಎಲ್ಲಾ ವಸ್ತುಗಳ ಮೇಲೆ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಗಳು ಇರುತ್ತವೆ.

43 ನಂತರ ದಿನಾಂಕ 19.05.2021 ರಂದು ನನ್ನ ಕಚೇರಿಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ರವಿ ಇವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು ಅವರು ತಮ್ಮ ಹೇಳಿಕೆಯಲ್ಲಿ ಘಟನಾ ಸ್ಥಳದಲ್ಲಿ ಆರೋಪಿಗಳು ಉಪಯೋಗಿಸಿದ ದ್ವಿಚಕ್ರ ವಾಹನ ಮತ್ತು ಕಾರನ್ನು ಗುರುತಿಸುವುದಾಗಿ ಹೇಳಿರುತ್ತಾರೆ. ಸದರಿ ವಾಹನಗಳನ್ನು ಅವರು ಪೊಲೀಸ್ ಠಾಣೆಯಲ್ಲಿ ಗುರುತಿಸಿರುತ್ತಾರೆ. ನಂತರ ಅದೇ ದಿನ ಗಾಯಾಳು ಸುನೀಲ್ ಕುಮಾರ್ ರವರು ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲನ್ನು ನೋಡಿ ಗುರುತಿಸಿರುತ್ತಾರೆ.

44. ಅದೇ ದಿನ ಇತರೆ ಸಾಕ್ಷಿದಾರರಾದ ಸಂತೋಷ್ ಕುಮಾರ್, ಮೋಹನ್, ತಮ್ಮೇಗೌಡ, ಆನಂದ್, ಪುಟ್ಟೇಗೌಡ, ದೇವರಾಜು ರವರನ್ನು ವಿಚಾರಣೆ ಮಾಡಿದ್ದು ಅವರ ಹೇಳಿಕೆಯನ್ನು ಪಡೆದುಕೂಂಡಿದ್ದೇನೆ. ಸದರಿಯವರು ತಮ್ಮ ಹೇಳಿಕೆಯಲ್ಲಿ ಹೇಮಂತ್ ಕುಮಾರ್ ರವರು ಕೊಲೆಯಾದ ವಿಷಯ ಗೊತ್ತಿರುತ್ತದೆ ಎಂದು ಹೇಳಿರುತ್ತಾರೆ. ನಂತರ ಅದೇ ದಿನ ಆರೋಪಿಗಳಿಗೆ ಕಾರು ನೀಡಿದ್ದ ಕಾರ್ತಿಕ್ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಅವರು ನನ್ನ ಮುಂದೆ ನಿಪಿ.84 ರಂತೆ ಹೇಳಿಕೆ ಕೊಟ್ಟಿರುತ್ತಾರೆ.

45. ಮೇಲೆ ಹೇಳಿದ ಪಂಚನಾಮೆಗಳನ್ನು ಮಾಡುವ ಸಂದರ್ಭದಲ್ಲಿ ನಮ್ಮ ಇಲಾಖೆಯವರು ಕೊಟ್ಟಿರುವ ಕ್ಯಾಮೇರಾದಿಂದ ಫೋಟೋಗಳನ್ನು ತೆಗೆದ ಸಿಬ್ಬಂದಿಯಾದ ಶರತ್ PC 361 ರವರಿಂದ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಕಾರ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.96 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.96(ಬಿ) ಎಂದು ಗುರುತಿಸಲಾಯಿತು.

46. ಅದೇ ದಿನ ಶವ ತನಿಖಾ ಪಂಚನಾಮೆಯ ಪಂಚರಾದ ಕೃಷ್ಣ/ ಚಾಸಾ.12, ಮೋಹನ್ ಕುಮಾರ್ / ಚಾಸಾ.13, ಪ್ರಕಾಶ್ /ಚಾಸಾ 14 ಹಾಗೂ ಮೃತನ ರಕ್ತ ಸಂಬಂಧಿಯಾದ ರಕ್ಷಿತ /ಚಾಸಾ.15 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ನಂತರ ದಿನಾಂಕ 21.05.2021 ರಂದು ಪೊಲೀಸರ ಅಭಿರಕ್ಷೆ ಪಡೆದ ಆರೋಪಿತರನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

47. ದಿನಾಂಕ 22.05.2021 ರಂದು ಪ್ರಕರಣದಲ್ಲಿ ಪಂಚನಾಮೆ ಅಡಿ ವಶಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 113/2021, 116/2021, 126/2021, 127/2021 ಅಡಿಯಲ್ಲಿ ನಮೂದಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ವಸ್ತುಗಳ ಮೇಲೆ ರಕ್ತದ ಕಲೆಗಳು ಇರುವುದರಿಂದ ಅವುಗಳನ್ನು DNA ಪರೀಕ್ಷೆಗಾಗಿ FSL ಗೆ ಕಳುಹಿಸಿಕೊಡುವಂತೆ ಮಾನ್ಯ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತೇನೆ. ಅದೇ ದಿನ PC 57 ಅನಿಲ್

ಗೌಡ ಇವರ ಮುಖಾಂತರ ಮಾನ್ಯ ನಿರ್ದೇಶಕರು ವಿಧಿ ವಿಜ್ಞಾನ ಪ್ರಯೋಗಲಾಯ, ಡಿ.ಎನ್.ಎ ಸೆಂಟರ್, ಮಡಿವಾಳ ಇವರಿಗೆ ಸಮುಚಿತ ಮಾರ್ಗದಲ್ಲಿ ಕಳುಹಿಸಿಕೊಟ್ಟಿರುತ್ತೇನೆ.

48. ದಿನಾಂಕ 24.05.2021 ರಂದು ಸದರಿ ವಸ್ತುಗಳನ್ನು ನೀಡಿ ಸ್ವೀಕೃತಿ ಪಡೆದು ವರದಿ ಮಾಡಿರುತ್ತಾರೆ. ನಂತರ ಸದರಿ ಸಿಬ್ಬಂದಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ವೈದ್ಯರು ಮೃತನ ಮರಣೋತ್ತರ ಪರೀಕ್ಷಾ ಕಾಲದಲ್ಲಿ ಸಂಗ್ರಹಿಸಿರುವ ವಸ್ತುಗಳನ್ನು HC 195 ನಾಗರಾಜುರವರ ಮುಖಾಂತರ ಮೈಸೂರು RFSL ಗೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿ ಕೊಟ್ಟಿರುತ್ತೇನೆ. ಅವರು ದಿನಾಂಕ 25.05.2021 ರಂದು ಬಂದು ಸ್ವೀಕೃತಿಯನ್ನು ನೀಡಿ ವರದಿ ನೀಡಿರುತ್ತಾರೆ. ನಂತರ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಗಳು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ತಾವು ಬಳಸುತ್ತಿರುವ ಮೊಬೈಲ್ ನಂಬರ್ ಗಳ CDR ವಿವರಗಳನ್ನು ಪಡೆಯಲು ಮಾನ್ಯ ಎಸ್.ಪಿ. ಸಾಹೇಬರ ಮುಖಾಂತರ ಸಂಬಂಧಪಟ್ಟ ನೋಡಲ್ ಅಧಿಕಾರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.118 ಮತ್ತು 119 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ..

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.